ಜನ ಜಾಗ ಖಾಲಿ ಮಾಡುವುದೇ ಗೊತ್ತಾಗುವುದಿಲ್ಲ. ಹೋಗುಹೋಗುತ್ತಲೇ ಕರೆದವರನ್ನು ಕಂಡು ಬಳಿ ಸಾರಿ ಊಟದ ಬಗ್ಗೆ ಒಂದೆರೆಡು ಒಳ್ಳೆಯ ಮಾತಾಡಿದರೆ ಕರೆದವನಿಗೂ ಒಂದು ಸಾರ್ಥಕ ಭಾವ ಮೂಡುತ್ತದಲ್ಲವೆ? ಈ ಕುರಿತು ಹೆಚ್ಚಿನವರು ಯೋಚಿಸುವುದೇ ಇಲ್ಲ. ನೋಡುವವರೆಗೂ ನೋಡಿ ಕೊನೆಗೆ ಕರೆದಾತನೇ ಎಲ್ಲರ ಬಳಿಯೂ ಹೋಗಿ ಊಟ ಹೇಗಿತ್ತು ರಾಯರೇ.. ತೃಪ್ತಿಯಾಯಿತಾ? ಎಂದು ವಿಚಾರಿಸುತ್ತಾ ತನಗೆ ತಾನೇ ಸಮಾಧಾನ ಹೊಂದುತ್ತಿರುವುದನ್ನು ಕಂಡಾಗ ಮರುಕವಾಗುತ್ತದೆ.



ನಾವು ಸಣ್ಣವರಾಗಿದ್ದಾಗ ಕೇಟರರ್ ಸಂಸ್ಕೃತಿಯೇ ಇರಲಿಲ್ಲ. ಮದುವೆ ಮನೆಗಳಲ್ಲಿ ಇಲ್ಲಿ ಚಪ್ಪರವಿದ್ದರೆ ಅಲ್ಲಿ ಅಷ್ಟು ದೂರದಲ್ಲಿ ಇಟ್ಟಿಗೆಗಳನ್ನು ಜೋಡಿಸಿ ಸೌದೆ, ಸೋಗೆಗರಿಗಳಿಂದಲೇ ಒಲೆ ಹಚ್ಚಿಬಿಡುತ್ತಿದ್ದರು. ಆಪ್ತ ಬಂಧುಗಳ ಉಸ್ತುವಾರಿಯಲ್ಲೇ ಭೂರಿ ಭೋಜನ ರೆಡಿಯಾಗುತ್ತಿತ್ತು. ಬಡಿಸುವವರೂ ಹೊರಗಿನವರೇನಲ್ಲ. ನಮ್ಮ ಮಾವ, ದೊಡ್ಡಪ್ಪಂದಿರೇ ಪಂಚೆ ಸುತ್ತಿಕೊಂಡು ತಯಾರಾಗಿ ಬಿಡುತ್ತಿದ್ದರು.

ಬಡಿಸುವಿಕೆಯಲ್ಲಿ ಅಪ್ಯಾಯಮಾನತೆ ಇರುತ್ತಿತ್ತು. ಸಲುಗೆಗೆ ಕೊರತೆಯಿರಲಿಲ್ಲ. ಎಲೆಗೆ ಕೈ ಅಡ್ಡ ಇಟ್ಟರೂ ಸರಿಸಿ 'ಐ, ಸುಮ್ನೆ ತಗಿಯಪ್ಪೋ ಕಂಡಿದೀನಿ... ನಂಗೆ ಗೊತ್ತೈತೆ ನೀನ್ ಎಷ್ಟ್ ತಿಂತೀಯಾ ಅಂತ...' ಅನ್ನುತ್ತಿದ್ದರು. ತಪ್ಪಿಸಿಕೊಳ್ಳಲು ಆಗುತ್ತಿರಲಿಲ್ಲ. ಎಷ್ಟೋ ಬಾರಿ ಅವರ ಪ್ರೀತಿಗೆ, ದಾಕ್ಷಿಣ್ಯಕ್ಕೆ ಕಟ್ಟು ಬಿದ್ದು ಹೊಟ್ಟೆ ಕೆಡಿಸಿಕೊಂಡದ್ದೂ ಉಂಟು.

ಈಗಂತೂ ಎಲ್ಲ ಫಂಕ್ಷನುಗಳಲ್ಲಿ ಕೇಟರಿಂಗ್‌ನವರು ಇರುತ್ತಾರೆ. ಯೂನಿಫಾರ್ಮುಗಳನ್ನು ಧರಿಸಿ ಲಗುಬಗೆಯಿಂದ ಓಡಾಡಿಕೊಂಡಿರುತ್ತಾರೆ. ಶುಚಿರುಚಿಗೆ ಕಡಿಮೆಯಿಲ್ಲ. ಎಲ್ಲವೂ ಅಚ್ಚುಕಟ್ಟು ನೀಟು! ಆದರೆ ಸಲುಗೆ, ಆಪ್ತತೆಗಳು ಮಾಯವಾಗಿವೆ. ಹೆಗಲು ತಡವುವರಿಲ್ಲ, ತಿನ್ನಲೇಬೇಕು ಎನ್ನುವ ಪ್ರೀತಿಯ ಒತ್ತಾಯಗಳಿಲ್ಲ. ಉಣ್ಣಲು ಕುಳಿತವನಿಗೆ ಬಡಿಸಿದವನಾರು